ಯಾರು ಬಂದಿದ್ದಾರೆ ನೋಡೋ; ಎರಡು ಕೆಂದಾಳೆ ಬೊಂಡ ಕೆತ್ತಿ ತಾರೋ... ನಿಮ್ಗೆ ಇವರು ಅಪರೂಪದ ನೆಂಟ್ರು...' ಎಂದು ಮೇಲಿನ ಅಂಗಳದಲ್ಲಿ ಕೂತು ತೆಂಗಿನಕ್ಕಾಗಳ ಸಿಪ್ಪೆ ಸುಲಿಯುತ್ತಿದ್ದ ಮಗನಿಗೆ ತಮ್ಮ ಬ್ಯಾರಿಭಾಷೆಯಲ್ಲೇ ಕೂಗಿ ಹೇಳಿದ್ದರು. ಗಂಡನ ಮಾತುಗಳನ್ನು ಒಳಗಿನಿಂದಲೇ ಕೇಳಿಸಿಕೊಳ್ಳುತ್ತಿದ್ದ ಅವರ ಹೆಂಡತಿ ಬಿಪಾತುಮ್ಮನವರು ಮತ್ತು ಹಿರಿಮಗಳು ಜುಲೇಕ ಮನೆಗೆ ಬಂದ ನೆಂಟರು ಯಾರಿರಬಹುದಪ್ಪ ಎಂಬ ಕುತೂಹಲದಿಂದ ಅಡುಗೆ ಮನೆಯ ಪುಟ್ಟ ಕಿಟಕಿಯಿಂದಲೇ ಇಣುಕು ಹಾಕಿದ್ದರು. ಉಭಯ ಕುಶಲೋಪರಿಯ ಮಾತುಗಳಾದೊಡನೆ ದೇವಪ್ಪ ಶೆಟ್ಟರು ತಮಗೆದುರಾಗಿರುವ ಮುಷ್ಕಿಲಿನ(ಸಂಕಷ್ಟದ) ಸಂದರ್ಭವನ್ನು ಕಾದ್ರಿಸ್ಯಾಬರ ಮುಂದಿಟ್ಟಿದ್ದರು. ಪಟೇಲ ದೇವಪ್ಪ ಶೆಟ್ಟರ ಬಾಯಿಂದ ಕೊಡಿಮರದ ಮಾತು ಬಂದಿದ್ದೇ ತಡ, ಕಾದ್ರಿಬ್ಯಾರಿಗಳು 'ಅಲ್ಲ ಧನಿಗಳೆ, ದೇವ್ರು ನಿಮ್ಮದಾದರೇನು... ನಮ್ಮದಾದರೇನು? ಎಲ್ಲವೂ ಒಂದೇ. ನಾವಿಲ್ಲಿ ಅಣ್ಣ ತಮ್ಮಂದಿರಂತೆ ಬದುಕುವುದೇ ಮುಖ್ಯ. ನಿಮ್ಮ ಕಷ್ಟಕ್ಕೆ ನಾನು ಒದಗದಿದ್ದರೆ ಹೇಗೆ?' ಎಂದು ತಟ್ಟನೆ ಅಂದರಲ್ಲದೆ, 'ನನ್ನಲ್ಲಿ ಒಂದಲ್ಲ... ಎಂಟು ತೇಗದ ಮರಗಳಿವೆ. ಎಲ್ಲವೂ ಬಲಿತ ಮರಗಳೇ. ನಿಮ್ಗೆ ಯಾವುದು ಬೇಕೋ ಅದನ್ನು ತಗೊಂಡು ಹೋಗಿ. ನಿಮ್ಮಿಂದ ನನ್ಗೆ ಒಂದು ನಯಾಪೈಸೆಯೂ ಬೇಕಾಗಿಲ್ಲ. ನನ್ನ ಹೆಸರಲ್ಲಿ ನಮ್ಮ ಊರಿನ ದೈವಕ್ಕೆ ನನ್ನದೊಂದು ಸಣ್ಣ ಕಾಣಿಕೆ ಅಂತ ತಿಳ್ಕೊಳ್ಳಿ' ಎಂದು ಅಂದಾಗ ಶೆಟ್ಟರಿಗೆ ಎದೆತುಂಬಿ ಬಂದಂತಾಗಿತ್ತು. ತಟ್ಟನೆ ಅವರು ಸಂತಸ ಹಾಗೂ ನಿರಾಳ ಭಾವದಿಂದ ನಿಟ್ಟುಸಿರು ಬಿಡುತ್ತ, ಕಾದ್ರಿಬ್ಯಾರಿಗಳ ಎರಡೂ ಕೈಗಳನ್ನು ಹಿಡಿದು ಬಾಗಿ ಅವುಗಳನ್ನು ತಮ್ಮ ಹಣೆಗೆ ಒತ್ತಿಕೊಂಡಿದ್ದರು.



ಇಷ್ಟೆಲ್ಲ ಕತೆ, ಇಲ್ಲಿ ಅಂಗಳದಲ್ಲಿ ನಡೆಯುತ್ತಿರುವಾಗ... ಅತ್ತ ಕಾದ್ರಿಬ್ಯಾರಿಗಳ ಮಗ ಅಬ್ಬುವು ಇನ್ನೂ ಕೆಂದಾಳೆ ಬೊಂಡಗಳನ್ನು ಕೆತ್ತುವ ಸಂಭ್ರಮದಲ್ಲಿದ್ದ. ಆತ ಐದು ಬೊಂಡಗಳನ್ನು ಕೆತ್ತಿಟ್ಟು, ಇನ್ನೇನು ಆರನೇ ಬೊಂಡವನ್ನು ಕೆತ್ತಬೇಕೆನ್ನುವಷ್ಟರಲ್ಲಿ, ದೇವ ಪಟೇಲ್ರು, ಆತನನ್ನು ಕೇಳಿಯೇ ಬಿಟ್ಟಿದ್ದರು ಯಾರಿಗೆ ಮಾರಾಯ ಇಷ್ಟು ಬೊಂಡ!? ನಮ್ಮನ್ನೇನು ಈ ಊರಿನ ಭೂತಗಳು ಅಂತ